**ದಿನಾಂಕಃ 04/02/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: 9 ನೇ ಪ್ರತಿವಾದಿ ಪರ ಶ್ರೀ. ಎಂ ಪಿ ಬಿ ವಕೀಲರಿಂದಃ**

17. ಮೀರ್ ಶೌಕತ್ ಅಲಿ ಮತ್ತು ತಾಲಿಯಾ ಬೇಗಂ ರವರಿಗೆ 8 ಜನ ಮಕ್ಕಳು. ಅಂದರೆ ಮೀರ್ ಮಸಲತ್ ಆಲಿ, ನಿಗಾರ್ ಬಾನು, ಗುಲ್ನಾಸ್ ಬಾನು, ನುಸ್ರತ್ ಆಲಿ, ಉಮೇ ಸಲ್ಮಾ, ಮೀರ್ ಫಿರಾಸತ್ ಆಲಿ, ಜೀನತ್ ಬಾನು. ಸದರಿ ದಂಪತಿಗೆ 7 ಜನ ಮಕ್ಕಳು ಎಂದರೆ ಸರಿಯಲ್ಲ. ನಾನು ಮೀರ್ ಶೌಕತ್ ಅಲಿ ಮತ್ತು ತಾಲಿಯಾ ಬೇಗಂ ರವರ ಮಗನಲ್ಲ ಎಂದರೆ ಸರಿಯಲ್ಲ. ಅವರ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೇನೆ.

18. ನಾನು ಅರಸೀಕೆರೆ ಯಲ್ಲಿ ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು 1968 ರಲ್ಲಿ ಸರಕಾರಿ ಹುದ್ದೆಗೆ ಸೇರಿರುತ್ತೇನೆ. ಏಪ್ರಿಲ್ 2006 ರಲ್ಲಿ ನಿವೃತ್ತಿಗೊಂಡಿದ್ದೇನೆ. ನನ್ನ ಸರಕಾರಿ ದಾಖಲಾತಿಗಳಲ್ಲಿ ಮತ್ತು ಸೇವಾ ಪುಸ್ತಕಗಳಲ್ಲಿ ನನ್ನ ಹೆಸರು ಮೀರ್ ಅಬ್ಬಾಸ್ ಆಲಿ ಎಂದು ಇದೆ ಎಂದರೆ ಸರಿ. ನಾನು ಈಗ ಎಸ್ ಬಿ ಐ ಬ್ಯಾಂಕ್ ನ ಮುಖಾಂತರ ಪಿಂಚಣಿ ತೆಗೆದುಕೊಳ್ಳುತ್ತಿದ್ದೇನೆ. ಪಿಂಚಣಿ ದಾಖಲೆಯಲ್ಲೂ ಸಹ ನನ್ನ ತಂದೆ ಹೆಸರು ಮೀರ್ ಅಬ್ಬಾಸ್ ಆಲಿ ಎಂದು ಇದೆ ಎಂದರೆ ಸರಿ. ಮೀರ್ ಅಬ್ಬಾಸ್ ಆಲಿ ಎಂಬುವವರನ್ನು ಮೀರ್ ಶೌಕತ್ ಆಲಿ ಎಂದೂ ಸಹ ಕರೆಯುತ್ತಿದ್ದರು ಎಂಬ ಸರಕಾರಿ ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾ ನೊಂದಾಯಿತ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

19. ನನ್ನ ಸ್ವಂತ ಮನೆ ಪಿರಿಯಾಪಟ್ಟಣದಲ್ಲಿ ಇದೆ. ನಾನು ಸೇವಾ ಸಲ್ಲಿಸುವಾಗಲೇ ಅನುಮತಿ ಪಡೆದು ಮನೆ ಕಟ್ಟಿದ್ದೇನೆ. ನನ್ನ ಹೆಂಡತಿ ಹೆಸರು ನೂರಿನ್ ತಾಜ್. ನಾನು ಮನೆ ಕಟ್ಟಲು ಬ್ಯಾಂಕ್ ನಿಂದ ಸಾಲ ಪಡೆದಿಲ್ಲ. ದಿಃ 07.03.20009 ರಂದು ನಾನು ಪಿರಿಯಾಪಟ್ಟಣ ಎಸ್ ಬಿ ಐ ಯಿಂದ ಮನೆ ಕಟ್ಟಲು ಸಾಲ ಪಡೆದಿದ್ದೆ ಎಂದರೆ ಸರಿಯಲ್ಲ. ಸದರಿ ಸಾಲಕ್ಕೆ ನನ್ನ ಹೆಂಡತಿ ಜಾಮೀನುದಾರರಾಗಿದ್ದರು ಎಂದರೆ ಸರಿಯಲ್ಲ. ಸಾಕ್ಷಿಗೆ ತಿಳುವಳಿಕೆ ಪತ್ರದ ನಕಲನ್ನು ತೋರಿಸಿ ಬಿ ವಿ ಜವರೇಗೌಡ ವಕೀಲರು ನನಗೆ ಅದನ್ನು ಕಳುಹಿಸಿದ್ದರು ಎಂದರೆ ಹೌದು ಎಂದು ನುಡಿದಿದ್ದು, ಸದರಿ ದಾಖಲೆಯನ್ನು **ನಿಡಿ-7** ಎಂದು ಗುರುತಿಸಲಾಯಿತು.

20. ಬೆಳ್ಳೂರು ಗ್ರಾಮದ ಸ. ನಂ.159 ರ ಜಮೀನು ಮೂಲತಃ ಮೀರ್ ಶೌಕತ್ ಆಲಿ ರವರಿಗೇ ಸೇರಿದ್ದು ಮತ್ತು ಅವರ ಸ್ವಂತ ಸ್ವತ್ತು ಎಂದರೆ ಸರಿ. ಸದರಿ ಸ್ವತ್ತು ಅವರಿಗೆ ಇನಾಂದಾರಿ ಮುಖಾಂತರ ಬಂದಂತಹ ಸ್ವತ್ತು. ಸ. ನಂ.159 ರ ಪೂಃ ಹನುಮೇಗೌಡರ ಸ್ವತ್ತು, ಅದರೆ ಸರ್ವೆ ನಂಬರು ಗೊತ್ತಿಲ್ಲ, ಪಃ ಜಯಸ್ವಾಮಿ ರವರ ಹೊಲ, ಅದರ ಸರ್ವೆ ನಂಬರು ಗೊತ್ತಿಲ್ಲ, ಉತ್ತರಕ್ಕೆಃ ಲಾಳ ಪುರದ ಗಡಿ, ದಃ ಸ. ನಂ. 160 ರ ಜಮೀನು. ಈ ದಾವೆ ಹೂಡುವ ಪೂರ್ವದಲ್ಲಿ ಮತ್ತು ನಂತರದಲ್ಲಿ ಸ. ನಂ.159 ರ ರೆವಿನ್ಯೂ ದಾಖಲಾತಿಗಳನ್ನು ಪರಿಶೀಲಿಸಿದ್ದೇನೆ. ಸ. ನಂ.159 ರ ಒಟ್ಟು ವಿಸ್ತೀರ್ಣ 1 ಎಕರೆ 31 ಗುಂಟೆ.

21. ದಿಃ 30.01.1992 ರಂದು ಮೀರ್ ಶೌಕತ್ ಆಲಿ ಯವರು ಸ. ನಂ. 159 ಕ್ಕೆ ಸಂಬಂಧಿಸಿದಂತೆ ವಿಲ್ಲನ್ನು ಬರೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ವಿಲ್ ಪ್ರಕಾರ ಅರ್ಧ ಆಸ್ತಿ ಮೀರ್ ತನಿಯತ್ ಆಲಿ ಮತ್ತು ಮೀರ್ ನಸರತ್ ಆಲಿ ರವರಿಗೆ ಬರೆದಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಲ್ ಪ್ರಕಾರ ಸ. ನಂ.159 ಜಮೀನು 159/1 ಮತ್ತು 159/2 ಎಂದು ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸ. ನಂ.159/1 ನಸರತ್ ಆಲಿ ರವರಿಗೆ ಮತ್ತು ಸ. ನಂ. 159/2 ಮೀರ್ ತಾನಿಯತ್ ಆಲಿ ರವರಿಗೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತಿನ ಇಸಿ ಯನ್ನು ನಾನು ಪಡೆದಿಲ್ಲ. ನಸರತ್ ಆಲಿ ರವರಿಗೆ ಬಂದ ಸ್ವತ್ತನ್ನು ಮೀರ್ ತನಿಯತ್ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮಾರಾಟವನ್ನು ಪ್ರಶ್ನಿಸಿ ನಾನು ದಾವೆ ಹೂಡಿಲ್ಲ, ಕಾರಣ ನನಗೆ ಗೊತ್ತಿರಲಿಲ್ಲ.

22. ನಾನು ಪಿರಿಯಾಪಟ್ಟಣದಲ್ಲಿ ಕಳೆದ 25 ವರುಷಗಳಿಂದ ಜೀವಿಸುತ್ತಿದ್ದೇನೆ. ಬೆಳ್ಳೂರು ಗ್ರಾಮದ ಸುತ್ತಮುತ್ತ ತುಂಬಾ ಗ್ರಾಮಗಳು ಇವೆ. ಸದರಿ ಗ್ರಾಮದವರು ಬೋರ್ ವೆಲ್ ತೆಗೆದು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಗ್ರಾಮದವರು ವಿಧ್ಯುತ್ ಅನ್ನು ಉನ್ನತೀಕರಣ ಗೊಳಿಸಲು ಕೆ ಪಿ ಟಿ ಸಿ ಎಲ್ ರವರಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರ ಅರ್ಜಿಯನ್ನು ಮನ್ನಿಸಿ ಸಬ್ ಸ್ಟೇಷನ್ ನಿರ್ಮಿಸಲು ಅವರು ಗ್ರಾಮದವರ ಜಮೀನನ್ನು ಮತ್ತು ಈ ದಾವೆಯ ಜಮೀನನ್ನು ಖರೀದಿಸಿದ್ದರು ಎಂದರೆ ಸಾಕ್ಷಿಯು ಪ್ರತಿವಾದಿಗಳು ಮಾರಾಟ ಮಾಡುತ್ತಿದ್ದಾರೆಂದು ಗೊತ್ತಾಗಿ ಕೆ ಇ ಬಿ, ನೊಂದಣಾಧಿಕಾರಿ ಮತ್ತು ತಹಸಿಲ್ದಾರರವರಿಗೆ ಅರ್ಜಿಯನ್ನು ಸಲ್ಲಿಸಿ ಮಾರಾಟದ ನೊಂದಣಿ ಮಾಡಬಾರದು ಎಂದು ತಕರಾರು ನೀಡಿದ್ದೆ. ಮಾರಾಟದ ಕ್ರಯ ಪತ್ರವನ್ನು

ಈ ದಾವೆಯಲ್ಲಿ ಪ್ರಶ್ನಿಸಿದ್ದೇನೆ. ಸದರಿ ಮಾರಾಟ ಎಷ್ಟು ಹಣಕ್ಕೆ ಆಯಿತು ಎಂದು ಗೊತ್ತಿಲ್ಲ. ನಾನು ನ್ಯಾಯಾಲಯದ ಶುಲ್ಕ ಕಟ್ಟಬೇಕಾಗುತ್ತದೆ ಎಂದು ಸದರಿ ಕ್ರಯ ಪತ್ರವನ್ನು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ಕ್ರಯಪತ್ರದ ಆಧಾರದ ಮೇರೆಗೆ ಖಾತೆ ಮಾಡಬಾರದು ಎಂದು ಪಿರಿಯಾಪಟ್ಟಣ ತಹಸೀಲ್ದಾರರಿಗೆ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ತಹಸೀಲ್ದಾರ ರವರು ನನ್ನ ತಕರಾರನ್ನು ತಳ್ಳಿ ಹಾಕಿ 9 ನೇ ಪ್ರತಿವಾದಿಯ ಹೆಸರು ಖಾತೆ ಕೂರಿಸಿದರು ಎಂದರೆ ಸರಿ. ಸಾಕ್ಷಿಗೆ ತಹಸೀಲ್ದಾರ ರವರ ಅದೇಶದ ಪ್ರತಿಯನ್ನು ತೋರಿಸಿ ಅದೇ ಆದೇಶ ಎಂದರೆ ಹೌದು ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು **ನಿಡಿ–8** ಎಂದು ಗುರುತಿಸಲಾಯಿತು. ಸದರಿ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿಲ್ಲ. ನನಗೆ ದಾವಾ ಸ್ವತ್ತಿನಲ್ಲಿ ಯಾವುದೇ ಬಾಗಾಂಶದ ಹಕ್ಕು ಇಲ್ಲದ ಕಾರಣ ನಿಡಿ–8 ರ ಆದೇಶವನ್ನು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ನಾನು ಮೀರ್ ಶೌಕತ್ ಆಲಿ ರವರ ಮಗನಲ್ಲದ ಕಾರಣ ನನಗೆ ದಾವಾ ಸ್ವತ್ತಿನಲ್ಲಿ ಯಾವುದೇ ಭಾಗಾಂಶದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಆಸ್ತಿಯಲ್ಲಿ ದುರ್ಲಾಭ ಪಡೆಯಲು ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**
**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**